ST. CLARET COLLEGE LIBRARY Bengaluru-13 AUTONOMOUS

St. Claret College

Autonomous, Bengaluru

UG END SEMESTER EXAMINATION-MAY 2026

BCA / BSC IV Semester

KAS425 Ganaka Vigyana Kannada–4

15

Roll No:
Date:

TIME: 3 hours. **MAX. MARKS: 80**

This paper contains Two printed pages and A to C parts

Instructions:
1. Verify and ensure that the question paper is completely printed.
2. Any discrepancies or questions about the exam paper must be reported to the COE within 1 hour after the examination.
3. Students must check the course title and course code before answering the question paper.

PART -A

ಐದು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ 5X2=10

1. ಬಿಹಾರದ ದಲಿತರ ಮೇಲೆ ನಡೆದ ದೌರ್ಜನ್ಯವನ್ನು ವಿವರಿಸಿ.
2. ಹೆಚ್ ನರಸಿಂಹಯ್ಯನವರಿಗೆ ಆಶ್ರಯ ನೀಡಿದ ಸ್ವಾಮಿಜಿ ಯಾರು?
3. ಕಪಿನಪ್ಪ ಯಾರು? ಅವನು ಪಶುವೈದ್ಯರನ್ನು ಬೇಟಿಯಾಗಲು ಕಾರಣವೇನು?
4. ಬಸಲಿಂಗನಿಗೆ ಎತ್ತುಗಳನ್ನು ಬದಲಿಸುವ ಅವಶ್ಯಕತೆ ಏನಿತ್ತು?
5. ಲಿಜ್ಜತ್ ಪಾಪಡ್ ಕಂಪನಿ ಎಲ್ಲಿ ಮತ್ತು ಯಾವಾಗ ಪ್ರಾರಂಭವಾಯಿತು?
6. ಸಾಹುಕಾರರ ಹೊಲವನ್ನು ಲೇಖಕರ ಅಪ್ಪ ಹೇಗೆ ಕಾಯುತ್ತಿದ್ದರು?
7. ಹೆಚ್. ನರಸಿಂಹಯ್ಯ ಅವರು ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಹೇಗೆ ಭಾಗವಹಿಸಿದರು?

ಐದು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ 5X5=25

8. ಪುನರ್ಜನ್ಮ, ಸಾವಿನ ಬಗ್ಗೆ ಹೆಚ್. ನರಸಿಂಹಯ್ಯನವರಿಗೆ ಇದ್ದ ನಂಬಿಕೆ ಏನು?
9. ಅಂಬೇಡ್ಕರ್ ವಾದ 'ಮಡಿಲಲ್ಲಿ ಇಟ್ಟುಕೊಂಡ ಕೆಂಡ' ಎಂದು ಹೇಳಲು ಕಾರಣವೇನು?
10. ಕಪಿನಪ್ಪ ಪಶುವೈದ್ಯರೊಂದಿಗೆ ನಡೆದುಕೊಂಡ ಬಗೆಯನ್ನು ವಿವರಿಸಿ.
11 ಬಸಲಿಂಗನ ಕಣ್ಣಲ್ಲಿ ನೋವು ಕಾಣಿಸಿಕೊಂಡ ಸಂದರ್ಭವನ್ನು ವಿವರಿಸಿ.
12 'ಮಹಿಳಾ ಸ್ವಾವಲಂಬನೆಯಿಂದ ಸಮಾಜದ ಅಭಿವೃದ್ಧಿ ಸಾಧ್ಯ' ಇದಕ್ಕೆ ಲಿಜ್ಜತ್ ಪಾಪಡ್ ಹೇಗೆ ಉದಾಹರಣೆಯಾಗಿದೆ.
13. ಹೆಚ್. ನಸಿಂಹಯ್ಯ ಅವರ ವಿದ್ಯಾರ್ಥಿ ಜೀವನವನ್ನು ಕುರಿತು ವಿವರಿಸಿ.
14. ಸಾಹುಕಾರರ ಕ್ರೌರ್ಯವನ್ನು ಬೆವರು, ಬಸಿರು, ಬಂಡಾಯ ಪದ್ಯದ ಮೂಲಕ ಹೇಗೆ ವ್ಯಕ್ತಪಡಿಸಲಾಗಿದೆ.

ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರ ಬರೆಯಿರಿ 2X10 =20

15. ಮುಟ್ಟಿಸಿಕೊಂಡವನು ಕತೆಯಲ್ಲಿ ಮೂಡಿಬಂದ ಜಾತಿವ್ಯವಸ್ಥೆಯ ಪರಿಣಾಮವನ್ನು ವಿವರಿಸಿ.
16. ಲಿಜ್ಜತ್ ಪಾಪಡ್ ಬಡಹೆಣ್ಣು ಮಕ್ಕಳ ಪಾಲಿಗೆ ವರವಾಗಿದೆ ಎಂಬುದನ್ನು ವಿವರಿಸಿ.
17. ದಲಿತರ ಮೇಲಿನ ಕ್ರೌರ್ಯವನ್ನು 'ದಹನದ ಕತೆ' ಪದ್ಯದ ಮೂಲಕ ಹೇಗೆ ವರ್ಣಿಸಲಾಗಿದೆ.
18. ಹೆಚ್.ನರಸಿಂಹಯ್ಯನವರ ಆತ್ಮಕತೆಯಲ್ಲಿ ಅಮೇರಿಕಾ ಮತ್ತು ಭಾರತದ ವಿದ್ಯಾರ್ಥಿ ಚಳುವಳಿಗಳ ಬಗ್ಗೆ ವಿವರಿಸಿ.

PART-B

19. **ಈ ಗದ್ಯ ಭಾಗವನ್ನು ಸಂಭಾಷಣೆಯಾಗಿ ಪರಿವರ್ತಿಸಿ** **1X 5=5**

ತಿಮ್ಮಪ್ಪ ತನ್ನ ರೋಗಿಯಲ್ಲಿ ಆಗಿದ್ದ ಬದಲಾವಣೆಯನ್ನು ಗಮನಿಸಿದರು; ಆತನ ಗಂಟಲು ದೊಡ್ಡದಾಗಿತ್ತು. ಅವನು ತನಗರಿವಿಲ್ಲದಂತೆಯೇ ಸಣ್ಣವನಾಗತೊಡಗಿದ್ದ. ಅವನ ಕಾಯಿಲೆ ದೇಹದ ಮಟ್ಟದಿಂದ ಮಾನಸಿಕ ಸ್ಥರವನ್ನು ತಲುಪತೊಡಗಿತ್ತು. ತಿಮ್ಮಪ್ಪ ನೋವಿನಿಂದಲೇ ಹೇಳಿದರು. 'ಬಸಲಿಂಗಪ್ಪ' ನಾನು ನಿನ್ನನ್ನು ಮುಟ್ಟಿದ್ದು ಡಾಕ್ಟರಾಗಿ ಆದರೆ ನಿನ್ನಂತ ಮುಗ್ಧ ಮನುಷ್ಯನಲ್ಲಿ ಕೂಡ ಈ ಮುಟ್ಟುವಿಕೆ ನಾನು ಊಹಿಸದೆ ಇದ್ದುದ್ದನ್ನು ಮಾಡಿದೆ. ಅದು ನಿನ್ನ ತಪ್ಪಲ್ಲ. ಇದಕ್ಕಾಗಿ ನಾನು ಯಾರನ್ನೂ ಬೈಯುವುದಿಲ್ಲ. ನೀನು ಈ ಸಲ ಒಂದು ಕೆಲಸ ಮಾಡು, ನನ್ನ ಹೆಸರು ಹೇಳಿ ಡಾಕ್ಟರ್ ಚಂದ್ರಪ್ಪನವರನ್ನು ನೋಡು. ಅವರು ನನ್ನಷ್ಟೇ ಒಳ್ಳೆಯ ಡಾಕ್ಟರು. ಏನೂ ತಪ್ಪು ತಿಳಿಯಬೇಡ ಎಂದರು.

20.ಕಂಪನಿಯ ಹೆಚ್.ಆರ್.ಮ್ಯಾನೇಜರ್ ಹುದ್ದೆಗೆ ಅರ್ಜಿ ಸಹಿತ ಅಭ್ಯರ್ಥನ ಪತ್ರ ಬರೆಯಿರಿ. **1X5=5**

21. **ನೀವು** ಕಾಡಿನಲ್ಲಿ ಸಂಚರಿಸುವಾಗ ಒಂದು ಮರದ ಮೇಲೆ ಹಕ್ಕಿಗೂಡನ್ನು ನೋಡಿದಿರಿ ಅದಕ್ಕೆ ಹಾವು ದಾಳಿಮಾಡುತ್ತಿರುವಸನ್ನಿವೇಶ ಕುರಿತು ಕತೆ/ಕವಿತೆ ಬರೆಯಿರಿ. **1X5=5**

22. **ಈ ಕೆಳಗಿನ ಗದ್ಯಭಾಗವನ್ನು ಇಂಗ್ಲೀಷ್‌ಗೆ ಭಾಷಾಂತರಿಸಿ.** **1X5=5**

ಇವತ್ತು ಬಂಡವಾಳಶಾಹಿ ಕನಸು ನನಸಾಗಿದೆ: ಎಲ್ಲವೂ ಸರಕಾಗಿ ಪರಿವರ್ತಿತವಾಗಿದೆ. ರೈತ ಬೆಳೆದ ಹೂವು, ಸುಬ್ಬಲಕ್ಷ್ಮಿಯ ಸಂಗೀತ, ಧ್ಯಾನ ಊಟ ಉಪಚಾರ ಪ್ರೇಮ, ಅಸ್ತೆ, ಅಕ್ಕರೆ, ಆರೋಗ್ಯ, ಶಿಕ್ಷಣ, ಮಾನವ ಸಂಬಂಧ ಎಲ್ಲವೂ ಸರಕಾಗಿ ಪರಿವರ್ತಿತವಾಗಿದೆ. ಸಂಗೀತವು ಮಾರಟಮಾಡಬಲ್ಲ ಸೀಡಿಗಳಾಗಿದೆ. ಆಸ್ತೆ ಯಾನ ನಂಬಿಕೆಯು ಆಸ್ತಾ ಎಂಬ ಟೀವಿ ಛಾನೆಲ್ಲಾಗಿದೆ. ಆರೋಗ್ಯ ಆಸ್ಪತ್ರೆಗಳೆಂಬ ಉದ್ದಿಮೆಯಾಗಿದೆ. ಊಟವೆಂಬುದು ಹೋಟೆಲಿನಲ್ಲಿ ಸಿಕ್ಕುವ ಸರಕಾಗಿದೆ. ಶಿಕ್ಷಣವು ಡೊನೆಷನ್ನಿನ ಮೂಲಕ ಪಡೆಯಬಲ್ಲ ಸರ್ಟಿಫಿಕೇಟಾಗಿದೆ.

PART-C

ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. **1X5=5**

23. ಲಿಜ್ಜತ್ ಪಾಪಡ್ ಪ್ರಾರಂಭವಾದ ವರ್ಷ

ಅ) ೧೯೫೬. ಆ) ೧೯೫೯.

ಇ) ೨೯೬೫. ಈ) ೧೯೯೮

24. ಬಸಲಿಂಗನ ಹೆಂಡತಿ ಹೆಸರು

ಅ) ನಂಜಮ್ಮ. ಆ) ಸಿದ್ದಮ್ಮ.

ಇ) ಸಿದ್ಲಿಂಗಿ. ಈ) ಮಾದೇವಿ

25.ಕಪಿನಪ್ಪನ ಎಮ್ಮೆಯನ್ನು ಬೀಳಿಸಲು ಹೋಗಿ ತಾನೇ ಬಿದ್ದ ವ್ಯಕ್ತಿ

ಅ) ಅಂಗಡಿ ಕೃಷ್ಣ. ಆ) ಮಾಯಣ್ಣ.

ಇ) ಕಪಿನಪ್ಪ. ಈ) ಯಾರೂ ಅಲ್ಲ

26. ಚಿಕ್ಕ ತಿಮ್ಮಯ್ಯನ ಹೆಂಡತಿಯ ಹೆಸರು

ಅ) ನಾಗಮ್ಮ. ಆ) ಜಾನಕಮ್ಮ.

ಇ) ಜಯಮ್ಮ. ಈ) ನೀಲಮ್ಮ

27. ಹೆಚ್. ನರಸಿಂಹಯ್ಯ ಅವರು ಪಿ ಎಚ್.ಡಿ. ಪಡೆದ ವಿಷಯ

ಅ) ನ್ಯೂಕ್ಲಿಯರ್ ಫಿಸಿಕ್ಸ ನಲ್ಲಿ. ಆ) ಆಸ್ಟ್ರೋ ಫಿಸಿಕ್ಸ ನಲ್ಲಿ.

ಇ) ಪಾರ್ಟಿಕಲ್ ಫಿಸಿಕ್ಸ ನಲ್ಲಿ. ಈ) ಆಟಾಮಿಕ್ ಫಿಸಿಕ್ಸ ನಲ್ಲಿ.